ಓ.ಎಸ್. ನಂ. 36/2025 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 20.6.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ದಿನಾಂಕ 12.12.2023 ರ ಕ್ರಯದ ಕರಾರು ಪತ್ರದ ಅಸಲು ಪ್ರತಿಯನ್ನು ನಿಪಿ1 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ1 ರ ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರತಿವಾದಿಯರ ಹೆಬ್ಬೆಟ್ಟು ಗುರುತು ಹಾಗೂ ಸಹಿಗಳನ್ನು ನೋಡಿ ಗುರುತಿಸಿದ್ದು, 1 ನೇ ಪ್ರತಿವಾದಿಯು ಹೆಬ್ಬೆಟ್ಟು ಗುರುತು ಹಾಕಿರುತ್ತಾರೆ. ಸಾಕ್ಷಿಯು 2 ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ1 ಬಿ ಎಂದು, ಸಾಕ್ಷಿಯು 3 ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ1 ಸಿ ಎಂದು, ಸಾಕ್ಷಿಯು 4 ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ1 ಡಿ ಎಂದು, ಪ್ರತಿವಾದಿ 5 ರಿಂದ 7 ರವರು ಪ್ರತಿವಾದಿ 4 ರವರ ಮೈನರ್ ಮಕ್ಕಳಾಗಿದ್ದು ಅವರ ಪರವಾಗಿ ಪ್ರತಿವಾದಿ 4 ರವರು ಸಹಿ ಮಾಡಿದ್ದು ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ1 ಇ ಎಂದು, ಸಾಕ್ಷಿಯು 8 ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ1 ಎಫ್ ಎಂದು, ಸಾಕ್ಷಿಯು 9 ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ1 ಜಿ ಎಂದು, ಸಾಕ್ಷಿಯು 10 ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ1 ಹೆಚ್ ಎಂದು, ಸಾಕ್ಷಿಯು 11 ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ1 ಐ ಎಂದು, ಸಾಕ್ಷಿಯು 12 ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ1 ಜೆ ಎಂದು, ಸಾಕ್ಷಿಯು 13 ನೇ

ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ1 ಕೆ ಎಂದು, ಸಾಕ್ಷಿಯು 14 ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ1 ಎಲ್ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ1 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ವೆಂಕಟೇಶ ಮತ್ತು ಚನ್ನೇಗೌಡರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ1 ನ್ನು ತಯಾರಿಸಿದ ಎನ್.ಚನ್ನಕೇಶವ ರವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ದಿನಾಂಕ 8.11.2024 ರಂದು ವಕೀಲರ ಮೂಲಕ ಪ್ರತಿವಾದಿಗಳಿಗೆ ನೀಡಿದ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ2 ಎಂದು, ಹನ್ನೊಂದು ಅಂಚೆ ರಶೀದಿಗಳನ್ನು ಒಟ್ಟಾಗಿ ನಿಪಿ3 ಎಂದು, ಆರು ಅಂಚೆ ಸ್ವೀಕೃತಿಗಳನ್ನು ಕ್ರಮವಾಗಿ ನಿಪಿ4 ರಿಂದ ನಿಪಿ9 ಎಂದು, ಜಾರಿಯಾಗದೇ ಹಿಂದಿರುಗಿದ ಐದು ಅಂಚೆ ಲಕೋಟೆಗಳನ್ನು ಕ್ರಮವಾಗಿ ನಿಪಿ10 ರಿಂದ ನಿಪಿ14 ಎಂದು, ದಾವಆಸ್ತಿಗೆ ಸಂಬಂಧಿಸಿದ ಪಹಣಿಯನ್ನು ನಿಪಿ15 ಎಂದು, ದಾವಆಸ್ತಿಗೆ ಸಂಬಂಧಿಸಿದ ಎಂ.ಆರ್.ಹೆಚ್ 5/2023-24 ನ್ನು ನಿಪಿ16 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,

ಹೆಚ್.ಡಿ.ಕೋಟೆ